724 (1029) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಕೃಷಿ ಸಾಲಗಳನ್ನು ಮುಖ್ಯವಾಗಿ ಲೇವಾದೇವಿದಾರರಿಂದ ಮತ್ತು ಬ್ಯಾಂಕುಗಳಿಂದ ತೊಂದರೆಗೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕೃಷಿ ಸಾಲಗಳನ್ನು ಮನ್ನಾ ಮಾಡುವ ಪ್ರಸ್ತಾವವು ಸರ್ಕಾರದ ಮುಂದಿದೆಯೇ ?

(ಆ) ಇಲ್ಲದಿದ್ದಲ್ಲಿ ದುಃಖಿತಪ್ತ ರೈತರ ಕುಟುಂಬದವರಿಗೆ ಪರಿಹಾರ ಒದಗಿಸುವ ದೃಷ್ಟಿಯಿಂದ ಅಂತಹ ರೈತರ ಕೃಷಿ ಸಾಲಗಳನ್ನು ಮನ್ನಾ ಮಾಡುವುದು ಅಪೇಕ್ಷಣೀಯವಲ್ಲವೇ ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಸರ್ಕಾರಿ ಆದೇಶ ಸಂಖ್ಯೆ ಸಿಒ 50 ಸಿಎಲ್‌ಎಸ್ 2007 ದಿನಾಂಕ 16–04–2007 ಮತ್ತು 15–05–2007 ಸಿಒ 64 ಸಿಎಲ್‌ಎಸ್ 2007 ದಿನಾಂಕ 16–04–2007 ಮತ್ತು 15–05–2007, ಸಿಒ 65 ಸಿಎಲ್ ಎಸ್ 2007 ದಿನಾಂಕ 16–04–2007 ಮತ್ತು 15–05–2007 ರ ಪ್ರಕಾರ ರಾಜ್ಯದಲ್ಲಿ ದಿನಾಂಕ 01–01–2006 ರಿಂದ 31–12–2006 ರ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳಿಂದ ರೈತರು ರೂ 25,000/– ವರೆಗೆ ಪಡೆದಿರುವ ಬೆಳೆ ಸಾಲವನ್ನು ಬಡ್ಡಿಸಹಿತ ಮನ್ನಾ ಮಾಡಲಾಗಿದೆ ರೂ 25,000/– ಕ್ಕೆ ಮೇಲ್ಪಟ್ಟು ಸಾಲ ಪಡೆದಿರುವ ಪ್ರಕರಣಗಳಲ್ಲಿ ರೂ 25,000ಕ್ಕೆ ಮೇಲ್ಪಟ್ಟ ಹೆಚ್ಚುವರಿ ಅಸಲನ್ನು ದಿನಾಂಕ 31–05–2007 ರೊಳಗೆ ಸಂಬಂಧಪಟ್ಟ ಸಹಕಾರಿ ಸಂಸ್ಥೆಗಳಿಗೆ ಮರುಪಾವತಿಸಿದಲ್ಲಿ ರೂ 25,000/– ಅಸಲು ಹಾಗೂ ಮರುಪಾವತಿ ದಿನಾಂಕದವರೆಗೆ ಬಡ್ಡಿಯನ್ನು ಮನ್ನಾ ಮಾಡಲಾಗಿದೆ

(ಆ) ಸಾಲದ ಬಾಧೆಯಿಂದ ಆತ್ಮಹತ್ಯೆ ಸಾಬೀತಾದಂತಹ ಪ್ರಕರಣಗಳಲ್ಲಿ, ಮೃತ ರೈತರ ಕುಟುಂಬಗಳಿಗೆ 1 00 ಲಕ್ಷ ರೂ ಗಳವರೆಗೆ ಪರಿಹಾರ ಧನವನ್ನು ಕೊಡಲಾಗುತ್ತಿದೆ

725 (827) ಶ್ರೀ ಜಯಪ್ರಕಾಶ ಹೆಗ್ಡೆ ಕೆ (ಬ್ರಹ್ಮಾವರ್) – ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(1) ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಕೃಷಿ / ಬೆಳೆ ಸಾಲದ ಪೈಕಿ ರೂ 25,000/– ದಂತೆ ಒಟ್ಟು ಮನ್ನಾ ಆದ ಮೊಬಲಗೆಷ್ಟು, ಇದಕ್ಕೆ ಬಿಡುಗಡೆಯಾದ ಮೊಬಲಗೆಷ್ಟು ?

(2) ಈ ಪೈಕಿ ಸಂಪೂರ್ಣ ಬಡ್ಡಿ ಮನ್ನಾ ಆದ ಮೊಬಲಗೆಷ್ಟು ? ಬಿಡುಗಡೆಯಾದ ಮೊಬಲಗೆಷ್ಟು?

(3) ದಿನಾಂಕ 31–12–2006 ರಿಂದ ಪಡೆದ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನು ದಿನಾಂಕ 31–05–2007 ರೊಳಗೆ ಮರು ಪಾವತಿಸಿದವರಿಗೆ ಎಷ್ಟು ಬಡ್ಡಿ ಮನ್ನಾ ಮಾಡಲಾಗಿದೆ? ಇದಕ್ಕೆ ಬಿಡುಗಡೆಯಾದ ಮೊಬಲಗೆಷ್ಟು?